# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ. ಹೆಚ್. ರಸ್ತೆ, ತುಮಕೂರು – 572 103
ದೂರವಾಣಿ : 0816–2254546 0816–2255596, 0816–2255597 ಫ್ಯಾಕ್ಸ್ : 0816–2270719

ಸಂಖ್ಯೆ:ತುವಿ:ಶೈವಿ:ಬಿ.ಇಡಿ:2018–19: 3514 ದಿನಾಂಕ: 07.01.2019

## : ಪರಿಷ್ಕೃತ ಅಧಿಸೂಚನೆ :

ವಿಷಯ: ಸ್ನಾತಕ ಶಿಕ್ಷಣ ಪದವಿಯ 2018–19 ನೇ ಸಾಲಿನ ಶೈಕ್ಷಣಿಕ ವೇಳಾಪಟ್ಟಿಯ ಕುರಿತು.

ಉಲ್ಲೇಖ: 1. ಈ ಕಚೇರಿಯ ಅಧಿಸೂಚನೆ ಸಂಖ್ಯೆ: ತುವಿ:ಶೈವಿ:ಬಿ.ಇಡಿ:2018–19:2758 ದಿ:07.11.2018
2. ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ ಪ್ರಶಿಕ್ಷಕರ ಸಂಘ, ತುಮಕೂರು ಇವರ ಮನವಿ ದಿನಾಂಕ:06.12.2018
3. ಶೈಕ್ಷಣಿಕ ವೇಳಾಪಟ್ಟಿ ಸಮಿತಿಯ ಸಭೆಯ ನಡಾವಳಿಗಳ ದಿನಾಂಕ: 03.01.2019
4. ಮಾನ್ಯ ಕುಲಪತಿಗಳ ಅನುಮೋದನೆ (ಕಂಡಿಕೆ–123) ದಿನಾಂಕ:05.01.2019

* * *

ಉಲ್ಲೇಖ (01) ರ ಅಧಿಸೂಚನೆಯಲ್ಲಿ 2018–19 ನೇ ಶೈಕ್ಷಣಿಕ ಸಾಲಿನ ಸ್ನಾತಕ ಶಿಕ್ಷಣ ಪದವಿಯ ಶೈಕ್ಷಣಿಕ ವೇಳಾಪಟ್ಟಿಯನ್ನು ಈಗಾಗಲೇ ಅಧಿಸೂಚಿಸಲಾಗಿತ್ತು, ಉಲ್ಲೇಖ(02) ರ ಪತ್ರದ ಮೇರೆಗೆ ಉಲ್ಲೇಖ(03) ರಲ್ಲಿ ನಡೆದ ಶೈಕ್ಷಣಿಕ ವೇಳಾಪಟ್ಟಿ ಸಮಿತಿ ಸಭೆಯ ನಿರ್ಣಯದಂತೆ ಸದರಿ ವೇಳಾಪಟ್ಟಿಯನ್ನು ಈ ಕೆಳಕಂಡಂತೆ ಪರಿಷ್ಕರಿಸಿ ಅಧಿಸೂಚಿಸಲಾಗಿದೆ.

| ಕ್ರಮ ಸಂಖ್ಯೆ | ಶೈಕ್ಷಣಿಕ ವೇಳಾಪಟ್ಟಿ | 2018–19 ನೇ ಶೈಕ್ಷಣಿಕ ಸಾಲಿನ ವಿದ್ಯಾರ್ಥಿಗಳಿಗೆ | 2017–18 ನೇ ಶೈಕ್ಷಣಿಕ ಸಾಲಿನ ವಿದ್ಯಾರ್ಥಿಗಳಿಗೆ |
|---|---|---|---|
| | | ಪ್ರಥಮ ಸೆಮಿಸ್ಟರ್ | ತೃತೀಯ ಸೆಮಿಸ್ಟರ್ |
| 1 | ಕಾಲೇಜಿನ ಮತ್ತು ತರಗತಿಗಳ ಪ್ರಾರಂಭ ದಿನಾಂಕ | 12.11.2018 | 01.04.2019 |
| 2 | ಪ್ರವೇಶಾತಿ ಕೊನೆಯ ದಿನಾಂಕ | 03.12.2018 | – |
| 3 | ದಂಡ ಶುಲ್ಕ ರೂ 1000/–ದೊಂದಿಗೆ ಪ್ರವೇಶಾತಿ ಕೊನೆಯ ದಿನಾಂಕ | 20.12.2018 | – |
| 4 | ಪ್ರವೇಶಾತಿ ತಃಖ್ತೆಯನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಬೇಕಾದ ಕೊನೆಯ ದಿನಾಂಕ | 31.12.2018 | 10.05.2019 |
| 5 | ಶೈಕ್ಷಣಿಕ ಮತ್ತು ಮೌಲ್ಯಾಂಕನ ಉಸ್ತುವಾರಿ ಸಮಿತಿಯ (MAAC) ಭೇಟಿಯ ಅವಧಿ | 28.02.2019 ರಿಂದ 11.03.2019 | 15.07.2019 ರಿಂದ 25.07.2019 |
| 6 | ಕಾಲೇಜಿನ ತರಗತಿಗಳ ಅಂತಿಮ ದಿನಾಂಕ | 12.03.2019 | 01.08.2019 |
| 7 | ಪರೀಕ್ಷೆಗಳ ಪ್ರಾರಂಭದ ದಿನಾಂಕ | 13.03.2019 | 03.08.2019 |

| ಕ್ರಮ ಸಂಖ್ಯೆ | ಶೈಕ್ಷಣಿಕ ವೇಳಾಪಟ್ಟಿ | ದ್ವಿತೀಯ ಸೆಮಿಸ್ಟರ್ | ಚತುರ್ಥ ಸೆಮಿಸ್ಟರ್ |
|---|---|---|---|
| 1 | ಕಾಲೇಜಿನ ಮತ್ತು ತರಗತಿಗಳ ಪುನರಾರಂಭ ದಿನಾಂಕ | 01.04.2019 | 04.09.2019 |
| 2 | ಶೈಕ್ಷಣಿಕ ಮತ್ತು ಮೌಲ್ಯಾಂಕನ ಉಸ್ತುವಾರಿ ಸಮಿತಿಯ (MAAC) ಭೇಟಿಯ ಅವಧಿ | 15.07.2019 ರಿಂದ 25.07.2019 | 09.12.2019 ರಿಂದ 21.12.2019 |
| 3 | ಕಾಲೇಜಿನ ತರಗತಿಗಳ ಅಂತಿಮ ದಿನಾಂಕ | 01.08.2019 | 31.12.2019 |
| 4 | ಪರೀಕ್ಷೆಗಳ ಪ್ರಾರಂಭದ ದಿನಾಂಕ | 03.08.2019 | 06.01.2020 |
| 5 | 2019–20ನೇ ಶೈಕ್ಷಣಿಕ ಸಾಲಿನ ಪ್ರಥಮ ಮತ್ತು ತೃತೀಯ ಸೆಮಿಸ್ಟರ್‌ನ ತರಗತಿಗಳ ಪ್ರಾರಂಭದ ದಿನಾಂಕ | 04.09.2019 | – |

## ಸೂಚನೆಗಳು

1. ವಿಶ್ವವಿದ್ಯಾನಿಲಯದಿಂದ ಸಂಯೋಜನೆ ಪಡೆಯದ ಕೋರ್ಸು ವಿಷಯಗಳಿಗೆ ಮತ್ತು ವಿಶ್ವವಿದ್ಯಾನಿಲಯದಿಂದ ಪಠ್ಯಕ್ರಮ ಮತ್ತು ವಿನಿಯಮ ಅನುಮೋದನೆಗೊಳ್ಳದ ಕೋರ್ಸುಗಳಿಗೆ ಪ್ರವೇಶ ಮಾಡಿಕೊಳ್ಳತಕ್ಕದ್ದಲ್ಲ, ಮತ್ತು ಅಂತಹ ಪ್ರವೇಶಾತಿಯನ್ನು ಅನುಮೋದನೆ ಮಾಡಲಾಗುವುದಿಲ್ಲ.
2. ವಿದ್ಯಾರ್ಥಿಗಳ ಪ್ರವೇಶಾತಿಯು N.C.T.E ಯ ಮಾನದಂಡಗಳಿಗೆ ಹಾಗೂ ವಿಶ್ವವಿದ್ಯಾನಿಲಯ ಕಾಲಕಾಲಕ್ಕೆ ಹೊರಡಿಸುವ ನಿಯಮಗಳಿಗನುಗುಣವಾಗಿ ನಡೆದಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು ಸಂಬಂಧಿಸಿದ ಕಾಲೇಜುಗಳ ಪ್ರಾಂಶುಪಾಲರು ಅಥವಾ ಸಂಸ್ಥೆಯ ಮುಖ್ಯಸ್ಥರ ಪೂರ್ಣ ಜವಾಬ್ದಾರಿಯಾಗಿರುತ್ತದೆ ಈ ನಿಯಮಗಳಿಗೆ ವಿರುದ್ಧವಾಗಿ ಆಗಿರುವ ಪ್ರವೇಶಾತಿಯು ಅಮಾನ್ಯವಾಗುತ್ತದೆ.
3. ಹೊರ ರಾಜ್ಯದ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವಾಗ ಕಡ್ಡಾಯವಾಗಿ ಅರ್ಹತಾ ಪ್ರಮಾಣ ಪತ್ರವನ್ನು ಪಡೆದುಕೊಂಡು ನಂತರ ಪ್ರವೇಶಾತಿ ಮಾಡಿಕೊಳ್ಳುವುದು. ಅರ್ಹತಾ ಪತ್ರಕ್ಕಾಗಿ ನಿಗದಿತ ನಮೂನೆಯಲ್ಲಿ ಅರ್ಜಿ, ಅಂಕಪಟ್ಟಿಗಳು ಮತ್ತು ಇತರ ದಾಖಲಾತಿಗಳನ್ನು ನಿಗದಿಪಡಿಸಿದ ಶುಲ್ಕದೊಂದಿಗೆ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿ ಅರ್ಹತಾ ಪ್ರಮಾಣ ಪತ್ರವನ್ನು ಪಡೆದುಕೊಳ್ಳುವುದು. ಅರ್ಹತಾ ಪ್ರಮಾಣ ಪತ್ರ ಇಲ್ಲದ ವಿದ್ಯಾರ್ಥಿಗಳಿಗೆ ಪ್ರವೇಶಾತಿಯನ್ನು ನೀಡಿ ಆನಂತರ ಅರ್ಹತಾ ಪತ್ರವನ್ನು ಕೋರಿದಲ್ಲಿ ಅಂತಹ ಪ್ರವೇಶಾತಿಯನ್ನು ಅನುಮೋದಿಸುವುದಿಲ್ಲವೆಂದು ತಿಳಿಸುತ್ತಾ ನಿರ್ದಾಕ್ಷಿಣ್ಯವಾಗಿ ಅಂತಹ ಕಾಲೇಜುಗಳ ಮೇಲೆ ಕ್ರಮಕೈಗೊಳ್ಳಲಾಗುವುದು. ಹೊರ ದೇಶಗಳ ವಿದ್ಯಾರ್ಥಿಗಳು ಪ್ರವೇಶಾತಿಗಾಗಿ ಕೆಳಕಂಡ ದಾಖಲಾತಿಗಳನ್ನು ಸಲ್ಲಿಸತಕ್ಕದ್ದು.
   d. ಅರ್ಹತಾ ಪ್ರಮಾಣ ಪತ್ರ
   e. ವಿದ್ಯಾರ್ಥಿಯ ವೀಸಾ
   f. ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ A.I.D.S (Acquired Immune Deficiency Syndrome) ಮುಕ್ತ ಪ್ರಮಾಣ ಪತ್ರ
4. a) ಅನ್ಯ ವಿಶ್ವವಿದ್ಯಾನಿಲಯಗಳಲ್ಲಿ ಪದವಿ ಮುಗಿಸಿರುವ ವಿದ್ಯಾರ್ಥಿಗಳು ಪ್ರವೇಶಾತಿಯ ಸಂದರ್ಭದಲ್ಲಿ ವಲಸೆ ಪ್ರಮಾಣ ಪತ್ರವನ್ನು ನೀಡಬೇಕು.

   b) ಯಾವುದೇ ವಿದ್ಯಾರ್ಥಿಯು ಮೂರು ವರ್ಷದ ಪದವಿ ಅಥವಾ ಎರಡು ವರ್ಷದ ಸ್ನಾತಕೋತ್ತರ ಪದವಿಯನ್ನು ವಿಶ್ವವಿದ್ಯಾನಿಲಯ/ಸ್ವಾಯತ್ತ ಕಾಲೇಜಿನಿಂದ ನಿಯಮಾವಳಿಯ ಪ್ರಕಾರ ನಿಗದಿತ ಕನಿಷ್ಠ ಅಂಕಗಳನ್ನು ಪಡೆಯದೇ ಹೋದರೆ ಬಿ.ಇಡಿ ಕೋರ್ಸಿಗೆ ಪ್ರವೇಶಾತಿ ಮಾಡಿಕೊಳ್ಳತಕ್ಕದ್ದಲ್ಲ.
5. ಯಾವುದೇ ಪ್ರವೇಶಾತಿಯನ್ನು ವಿಶ್ವವಿದ್ಯಾನಿಲಯ/ N.C.T.E./ ಸರ್ಕಾರ ನಿಗದಿಪಡಿಸಿರುವ ಅನುಮೋದಿತ ಸೀಟುಗಳಿಗಿಂತ ಹೆಚ್ಚಾಗಿ ಪ್ರವೇಶಾತಿ ಮಾಡುವಂತಿಲ್ಲ, ಅಂತಹ ಪ್ರವೇಶಾತಿಯು ಕ.ರಾ.ವಿ ಅಧಿನಿಯಮ 2000 ಪ್ರಕರಣ 59(18) ರ ಪ್ರಕಾರ ಅಮಾನ್ಯವಾಗುತ್ತದೆ.
6. ವಿದ್ಯಾರ್ಥಿಯ ಕನಿಷ್ಠ ಹಾಜರಾತಿ, ಪರೀಕ್ಷಾ ಪ್ರಶ್ನೆ ಪತ್ರಿಕೆ ಅದರ ಸ್ವರೂಪ ಮುಂತಾದವುಗಳನ್ನೊಳಗೊಂಡಂತೆ ಸದರಿ ಕೋರ್ಸಿಗೆ ಸಂಬಂಧಿಸಿದಂತೆ ವಿನಿಯಮಗಳನ್ನು ವಿದ್ಯಾರ್ಥಿಯ ಗಮನಕ್ಕೆ ತರುವುದು. ಪ್ರತೀ ವರ್ಷದ ಪ್ರಾರಂಭದಲ್ಲಿ ವಿದ್ಯಾರ್ಥಿಯ ದಾಖಲಾತಿಯ ವಿವರವನ್ನು ವಿಶ್ವವಿದ್ಯಾನಿಲಯಕ್ಕೆ ನಿಗದಿತ ದಿನದೊಳಗೆ ಸಲ್ಲಿಸುವುದು.
7. ವಿದ್ಯಾರ್ಥಿಗಳ ಪ್ರವೇಶಾತಿಯನ್ನು ವಿಶ್ವವಿದ್ಯಾನಿಲಯವು ನಿಗದಿಪಡಿಸಿರುವ ಪ್ರಸಕ್ತ ಶೈಕ್ಷಣಿಕ ವರ್ಷದ ದಿನಾಂಕದೊಳಗಾಗಿ ಪ್ರವೇಶಾತಿಯನ್ನು ಮಾಡಿಕೊಳ್ಳುವುದು, ನಿಗದಿಪಡಿಸಿರುವ ಕೊನೆಯ ದಿನಾಂಕದ ನಂತರ ಯಾವುದೇ ಪ್ರವೇಶಾತಿಯನ್ನು ಮಾಡಿಕೊಳ್ಳತಕ್ಕದ್ದಲ್ಲ, ಒಂದು ವೇಳೆ ಮಾಡಿಕೊಂಡಲ್ಲಿ ಅಂತಹ ಪ್ರವೇಶಾತಿಯು ಅಮಾನ್ಯವಾಗುತ್ತದೆ.
8. ಶೈಕ್ಷಣಿಕ ವೇಳಾಪಟ್ಟಿಯನ್ನು ತಮ್ಮ ಕಾಲೇಜಿನ ಎಲ್ಲಾ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ಗಮನಕ್ಕೆ ತರುವುದು.
9. ಶೈಕ್ಷಣಿಕ ವೇಳಾಪಟ್ಟಿಯಲ್ಲಿನ ಯಾವುದೇ ದಿನಾಂಕದಲ್ಲಿ ಸರ್ಕಾರಿ ರಜೆ ಬಂದಲ್ಲಿ/ಘೋಷಿಸಿದಲ್ಲಿ ಅದರ ಕಾರ್ಯಗಳು ನಂತರದ ಕರ್ತವ್ಯದ ದಿನದಂದು ಪ್ರಾರಂಭವಾಗಿದೆಯೆಂದು ಭಾವಿಸತಕ್ಕದ್ದು.

ಆದೇಶದ ಮೇರೆಗೆ

ಕುಲಸಚಿವರು

ಕುಲಸಚಿವರು
ತುಮಕೂರು ವಿಶ್ವವಿದ್ಯಾನಿಲಯ

ಗೆ,

ಪ್ರಾಂಶುಪಾಲರು, ಎಲ್ಲಾ ಸಂಯೋಜಿತ ಬಿ.ಇಡಿ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

ಪ್ರತಿಗಳು:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಬಹುಮಹಡಿಗಳ ಕಟ್ಟಡ, ಡಾ. ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು – 560 001
2. ಕುಲಸಚಿವರು(ಮೌ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
3. ಕುಲಸಚಿವರು,ಮೈಸೂರು/ಬೆಂಗಳೂರು/ಕರ್ನಾಟಕ/ಕುವೆಂಪು/ಮಂಗಳೂರು/ದಾವಣಗೆರೆ/ಮಹಿಳಾ ವಿಶ್ವವಿದ್ಯಾನಿಲಯಗಳು
4. ಡೀನರು, ಕಲಾ, ವಿಜ್ಞಾನ ವಾಣಿಜ್ಯ ಮತ್ತು ಶಿಕ್ಷಣ ನಿಕಾಯ ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
5. ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
6. ಅಧ್ಯಕ್ಷರು, ಸ್ನಾತಕ ಶಿಕ್ಷಣ ಪದವಿ ಅಧ್ಯಯನ ಮಂಡಳಿ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
7. ಉಪಗ್ರಂಥಪಾಲಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
8. ಎಲ್ಲಾ ವಿಭಾಗಗಳ ಉಪಕುಲಸಚಿವರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
9. ಎನ್.ಎಸ್.ಎಸ್ ಸಂಯೋಜಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
10. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು – ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕೋರಿದೆ.
11. ವಿಶೇಷಾಧಿಕಾರಿಗಳು, ಮಾನ್ಯ ಕುಲಪತಿಗಳ ಅಪ್ತ ಕಾರ್ಯಾಲಯ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
12. ಮಾನ್ಯ ಕುಲಸಚಿವರ ಅಪ್ತ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
13. ಕಚೇರಿ ಪ್ರತಿ/ಕಡತ ಪತ್ರಿಗಳು.